ಬಣ್ಣ ಮಾಸಿದ ಬಟ್ಟೆಯಂತೆ ತೋರುವುದಲ್ಲದೆ ಅಲ್ಲಲ್ಲಿ ಹರಿದುಕೊಂಡು ಧರಿಸುತ್ತಾರೆ. ಒಮ್ಮೆ ಅವಕಾಶ ಕೊಟ್ಟರೆ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಧರಿಸಿಕೊಂಡು ಬಂದರೆ ವಿದ್ಯಾರ್ಥಿಗಳ ನಿಯಂತ್ರಣ ಕಷ್ಟಸಾಧ್ಯ..’

‘ಜೀನ್ಸ್ ಧರಿಸುವುದು ಸುಲಭ. ಅದರ ನಿರ್ವಹಣೆ ಸುಲಭ. ಇಸ್ತ್ರಿ ಬೇಡ ಮತ್ತು ಹೇಗಿದ್ದರೂ ನಡೆಯುತ್ತದೆ. ನಮಗೆ ಬಗೆ ಬಗೆಯ ವಿನ್ಯಾಸದ ಮೇಲುಡುಗೆ, ಟೀ ಶರ್ಟ್ ಕೊಂಡರೆ ಆಯಿತು. ವಾರವಿಡೀ ಒಂದೇ ಪ್ಯಾಂಟ್ ಧರಿಸಿದರೂ ಯಾರೂ ಗಮನಿಸುವುದಿಲ್ಲ. ಅಲ್ಲದೆ ಜೀನ್ಸ್ ಬಟ್ಟೆ ಧರಿಸಿದರೆ ನಾವು ಆಧುನಿಕರಂತೆ ಕಾಣುತ್ತೇವೆ. ಇಲ್ಲದಿದ್ದರೆ ಸಹಪಾಠಿಗಳು ಗುಗ್ಗು ಎಂದು ದೂರುತ್ತಾರೆ’ ಎನ್ನುತ್ತಾರೆ ಕಾಲೇಜು ವಿದ್ಯಾರ್ಥಿನಿ ಅಮೂಲ್ಯ.

ಗೃಹಿಣಿಯರಿಗೂ ಅಚ್ಚುಮೆಚ್ಚು

ಯುವ ಗೃಹಿಣಿಯರಿಗೂ ಜೀನ್ಸ್ ಅಚ್ಚುಮೆಚ್ಚು. ‘ಜೀನ್ಸ್ ಪ್ಯಾಂಟ್‌ನಲ್ಲಿ ಅನೇಕ ಪಾಕೆಟ್‌ಗಳಿರುತ್ತವೆ.




ನಮಗೆ ಹೊರ ಹೋಗಬೇಕೆಂದಿದ್ದರೆ ವ್ಯಾಲೆಟ್, ಫೋನ್, ಮನೆಯ ಕೀ ಎಲ್ಲವನ್ನು ಹಿಡಿದುಕೊಳ್ಳಬೇಕಾದಾಗ ಬ್ಯಾಗ್ ಅನಿವಾರ್ಯವಾಗುತ್ತದೆ. ಆದರೆ ಸ್ವತಂತ್ರವಾಗಿ ಓಡಾಡುವುದಕ್ಕೆ ಕೈಯಲ್ಲಿ ಬ್ಯಾಗ್ ಇದ್ದರೆ ಕಿರಿಕಿರಿ. ಇಂತಹ ಸಂದರ್ಭದಲ್ಲಿ ಜೀನ್ಸ್ ಪ್ಯಾಂಟ್ ಖಂಡಿತಾ ಸಹಕಾರಿ. ಇದರ ಪಾಕೆಟ್‌ಗಳಲ್ಲಿ ಎಲ್ಲವನ್ನೂ ಇರಿಸಿಕೊಂಡು ಬರಿಗೈಯಲ್ಲಿ ಆರಾಮವಾಗಿ ಓಡಾಡಬಹುದು. ಜೊತೆಗೆ ನಾವು ದಪ್ಪ ಇರಲಿ, ತೆಳ್ಳಗಿರಲಿ ಎಲ್ಲರಿಗೂ ಹೊಂದುವ ಬಟ್ಟೆ ಇದು’ ಎನ್ನುತ್ತಾರೆ ಗೃಹಿಣಿ ಸುಕನ್ಯಾ .

ಆದರೆ ಸ್ಕಿನ್‌ಫಿಟ್ ಜೀನ್ಸ್ ಬಟ್ಟೆ ಧರಿಸುವುದು ದೇಹಕ್ಕೆ ಹಾನಿಕರ. ಇದು ಅನೇಕ ಅಧ್ಯಯನಗಳಲ್ಲೂ ಇದು ದೃಢಪಟ್ಟಿದೆ. ಹೆಚ್ಚಾಗಿ ಅತ್ಯಂತ ಟೈಟ್ ಜೀನ್ಸ್ ಧರಿಸುವವರಿಗೆ ನರ ದೌರ್ಬಲ್ಯ ಕಾಡುತ್ತದೆ. ಕಾಲಿನ, ತೊಡೆಯ ಭಾಗದ ನರಗಳು ಕಂಪಿಸತೊಡಗುತ್ತವೆ. ಕ್ರಮೇಣ ಕಾಲಿನ ಮೇಲೆ ಶಕ್ತಿಕುಂದಿ ಕುಸಿಯುವುದೂ ಇದೆ. ಮುಂಬೈಯಲ್ಲಿ ಒಬ್ಬಾಕೆ ಹೀಗೆ ಕುಸಿದು ಬಿದ್ದಾಗ ಆಸ್ಪತ್ರೆಯಲ್ಲಿ ಆಕೆ ಧರಿಸಿದ ಅತ್ಯಂತ ಬಿಗಿಯಾದ ಜೀನ್ಸ್ ಪ್ಯಾಂಟನ್ನು ಕತ್ತರಿಸಿ ಹರಿದು ತೆಗೆಯಬೇಕಾಗಿ ಬಂದ ಪ್ರಸಂಗವನ್ನು ಪತ್ರಿಕೆಗಳಲ್ಲಿ ಪ್ರಕಟವಾದದ್ದನ್ನು ಜನ ಮರೆತಿಲ್ಲ. ಅನೇಕ ಕಡೆಗಳಲ್ಲಿ ಹುಡುಗಿಯರು, ಹುಡುಗರು ದಿಢೀರನೆ ಕುಸಿದು ಬಿದ್ದ ಘಟನೆಗಳು ವರದಿಯಾದದ್ದುಂಟು. ಇದಲ್ಲದೆ ಹುಡುಗಿಯರು ಅತಿ ಬಿಗಿಯಾದ ಜೀನ್ಸ್ ಬಟ್ಟೆ ಧರಿಸುವುದರಿಂದ ಚರ್ಮದ ಕಾಯಿಲೆ ಉಂಟಾಗುವುದಿದೆ. ಮೂತ್ರ ಸೋಂಕು ಉಂಟಾಗಿ ದೀರ್ಘಕಾಲ ಚಿಕಿತ್ಸೆ ಪಡೆಯಬೇಕಾದ ಸಂದರ್ಭ ಗಳೂ ಬರುತ್ತದೆ. ತುರಿಕೆ ಮುಂತಾದ ಚರ್ಮದ ಸಮಸ್ಯೆಗಳು ಉಂಟಾಗುತ್ತವೆ. ಅತ್ಯಂತ ಬಿಗಿ ಉಡುಪು ಧರಿಸುವುದರಿಂದ ಕೆಲವರಲ್ಲಿ ಬೆನ್ನುನೋವು ಕಾಣಿಸಬಹುದು ಎಂಬುದು ವೈದ್ಯಲೋಕದ ಎಚ್ಚರಿಕೆ.

‘ಅಮ್ಮಂದಿರಿಗಂತೂ ಈ ಜೀನ್ಸ್ ಬಟ್ಟೆ ತಲೆನೋವು. ಅದನ್ನು ಸ್ವಚ್ಛಗೊಳಿಸುವುದರೊಂದಿಗೆ ಒಣಗಿಸುವುದೂ ಸಮಸ್ಯೆ. ದಪ್ಪದ ಬಟ್ಟೆಯಾದ್ದರಿಂದ ಬೇಗ ಒಣಗುವುದಿಲ್ಲ. ಮಳೆಗಾಲದಲ್ಲಿ ಒದ್ದೆಯಾಗಿ ಕೆಟ್ಟ ವಾಸನೆ ಬರುತ್ತದೆ. ಹಾಗಾಗಿ ಮಳೆಯ ಸಂದರ್ಭದಲ್ಲಿ ಜೀನ್ಸ್ ಧರಿಸಲು ಬಿಡುವುದಿಲ್ಲ’ ಎನ್ನುತ್ತಾರೆ ಮೈಸೂರಿನ ಗಾಯತ್ರಿ.

‘ಹೆಣ್ಣು ಮಕ್ಕಳು ಆಸೆ ಪಟ್ಟು ಧರಿಸುತ್ತಾರೆ. ಆದರೆ ಇದರ ಮೂಲ ಉದ್ದೇಶ ಹೆಚ್ಚು ಹೆಚ್ಚು ಆಕರ್ಷಕವಾಗಿ ಕಾಣುವುದು. ತಾವು ದಪ್ಪಗಿರಲಿ, ತೆಳ್ಳಗಿರಲಿ, ಉದ್ದವಿರಲಿ, ಗಿಡ್ಡವಿರಲಿ ಎಲ್ಲರನ್ನೂ ಎಲ್ಲವನ್ನೂ ಎತ್ತಿ ತೋರಿಸುತ್ತದೆ ಜೀನ್ಸ್. ಹಾಗಾಗಿ ಅನುಕೂಲಕ್ಕಿಂತ ಆಕರ್ಷಕವಾಗಿ ಕಾಣುವುದೇ ಜೀನ್ಸ್ ಧರಿಸುವ ಉದ್ದೇಶ’ ಎನ್ನುತ್ತಾರೆ ಗಾಯತ್ರಿ.

ಎಲ್ಲ ಯುವಕರೂ ಜೀನ್ಸ್ ಧರಿಸುತ್ತಾರೆ ಎಂದೇನಿಲ್ಲ. ಇಂದು ಅನೇಕ ಪೋಷಕರು ಜೀನ್ಸ್ ಬೇಡವೇ ಬೇಡವೆಂದು ಧರಿಸಲು ಅವಕಾಶ ಕೊಡದೇ ಇರುವ ಸಂದರ್ಭಗಳೂ ಅನೇಕ ಇವೆ. ಹುಡುಗಿಯರಿಗಷ್ಟೇ ಅಲ್ಲ ಹುಡುಗರಿಗೂ ನಿಯಂತ್ರಣ ಹೇರುವವರೂ ಇದ್ದಾರೆ. ಎಷ್ಟೋ ಜನ ಯುವಕರೂ ಸಹ ಯಾವ ಒತ್ತಡವೂ ಇಲ್ಲದೆ ತಾವಾಗಿಯೇ ಜೀನ್ಸ್ ಧರಿಸುವ ಕಡೆ ಮುಖ ಮಾಡದಿರುವವರೂ ಇದ್ದಾರೆ.

‘ಜೀನ್ಸ್ ಬಟ್ಟೆ ಧರಿಸದೇ ಇರುವುದಕ್ಕೆ ಅಂತಹ ಸೈದ್ಧಾಂತಿಕ ಕಾರಣವೇನಿಲ್ಲ. ಅದು ಬೇಡ ಅಷ್ಟೆ’ ಎನ್ನುತ್ತಾರೆ ಜೀನ್ಸ್ ಬಟ್ಟೆಯನ್ನು ಧರಿಸದೇ ಇರುವ ಯುವ ಉಪನ್ಯಾಸಕ ಅರುಣ್.

ಒಂದಂತೂ ನಿಜ. ಇಂತಹ ಬ್ರಾಂಡ್ ಉಡುಗೆಗಳನ್ನು ಹೆಚ್ಚು ಹೆಚ್ಚು ಧರಿಸಲು ತೊಡಗಿದಂತೆ ಉಡುಗೆತೊಡುಗೆಯಲ್ಲಿರುವ ವೈವಿಧ್ಯಗಳು, ಪ್ರಾದೇಶಿಕ ವೈಶಿಷ್ಟ್ಯಗಳು, ಸಂಪ್ರದಾಯಗಳು ಕಾಣೆಯಾಗುತ್ತಿದೆ. ನಮ್ಮ ವಸ್ತ್ರಸಂಸ್ಕೃತಿ ಅತ್ಯಂತ ವೈವಿಧ್ಯಮಯ. ಆದರೂ ಅನೇಕರು ದೂರುವಂತೆ ಆಧುನಿಕ ಧಾವಂತದ ಜೀವನಶೈಲಿಗೆ ಅವು ಒಗ್ಗುವುದಿಲ್ಲ. ಪಾಲಿಸುವುದೂ ಕಷ್ಟಸಾಧ್ಯ. ■



